ತಿಳಿಸಿರುವಂತೆ ಸರ್ಕಾರಿ ವಾಹನಗಳನ್ನೂ ಕೂಡ ಪರೀಕ್ಷೆ ಮಾಡಲಾಗಿದೆ. ಸುಮಾರು 55 ವೆಹಿಕಲ್‌ಗಳ ಮೇಲೆ ಪರಿಸರ ಮಾಲಿನ್ಯ ಮಂಡಳಿಯವರು ಕೇಸ್ ಹಾಕಿದ್ದಾರೆ. ಇನ್ನು ಕೈಗಾರಿಕೆಗಳಿಗೆ ಸಂಬಂಧಪಟ್ಟಂತೆ ಹೇಳುವುದಾದರೆ, ಅಲ್ಲೂ ಕೂಡ ಪರೀಕ್ಷೆ ಮಾಡುತ್ತಿದ್ದಾರೆ ಎಂದು ಹೇಳಬಯಸುತ್ತೇನೆ. ಮಾನ್ಯ ಸದಸ್ಯರು ಗಿಡ ನೆಡಲು ಕರೆದರೆ ನಾನು ಬರುವುದಿಲ್ಲ ಎಂದು ಹೇಳಿದರು. ಅವರು ಒಂದು ಸಾರಿ ನನ್ನನ್ನು ಕರೆದಿದ್ದರು, ನಾನು ಹೋಗಿದ್ದೆ, ಆದರೆ ಅವರೇ ಬರಲಿಲ್ಲ. ಆದರೂ ಅವರು ನನ್ನ ಮೇಲೆ ಈ ರೀತಿ ಆರೋಪ ಮಾಡುತ್ತಿದ್ದಾರೆ. ಪಾಪ! ಅವರಿಗೇನೋ ಬಾಯಿ ಚಟ ಇದೆ, ಹೇಳಿಕೊಳ್ಳುತ್ತಾರೆ ಬಿಡಿ. ಮೊದಲನೇ ಸಾರಿ ಮಾನ್ಯ ಸದಸ್ಯರು ನನಗೆ ಆಹ್ವಾನ ನೀಡಿದಾಗ ನಾನು ಹೋಗಿದ್ದೆ, ಆದರೆ ಇವರೇ ಅಲ್ಲಿಗೆ ಬಂದಿರಲಿಲ್ಲ. ಇನ್ನೊಂದು ಸಾರಿ ಅವರು ಕರೆದಾಗ ನನಗೆ ಅನಾನುಕೂಲವಾದ್ದರಿಂದ ನಾನು ಹೋಗಲಾಗಲಿಲ್ಲ. ಮೆಂಬರ್ಸ್‌ಗಳು ಕರೆದ ಕಡೆಯಲ್ಲೆಲ್ಲಾ ನಾನು ಹೋಗಲೇಬೇಕು ಎನ್ನುವಂತಹ ಕಾನೂನು ಕೂಡ ಇಲ್ಲ. ಬಹುಶಃ ನನ್ನ ಬಗ್ಗೆ ಅವರ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ನಾನು ವಕೀಲಿ ಬಾರ್‌ನಲ್ಲಿ ಇದ್ದ ಕಾಲದಿಂದಲೂ ಸಹ ನಾನು ಅವರನ್ನು ನೋಡುತ್ತಿದ್ದೇನೆ. ಸದಸ್ಯರು ಕರೆದಾಗ ನಾನು ಹೋಗುವುದಿಲ್ಲ ಎನ್ನುವಂತಹ ಅಪಾದನೆ ನಿರಾಧಾರವಾದುದು. ಮೇಲಿಂದ ಮೇಲೆ ಇಂತಹ ಆರೋಪ ಮಾಡಿದರೆ ಅದು ತಪ್ಪಾಗುತ್ತದೆ. ಇದರಿಂದ ನಾನು ಹೆದರುತ್ತೇನೆ ಎಂದು ತಿಳಿದುಕೊಂಡು ಮಾನ್ಯ ಸದಸ್ಯರು ಇಂತಹ ಆರೋಪ ಮಾಡಿದ್ದರೆ, ನಾನು ಇದಕ್ಕೆಲ್ಲಾ ಹೆದರುವುದಿಲ್ಲ, ನಾನು ನನ್ನ ಕೆಲಸವನ್ನು ನನ್ನ ಆತ್ಮಕ್ಕೆ ಒಪ್ಪುವ ರೀತಿಯಲ್ಲಿ ಮಾಡುತ್ತೇನೆ ಎಂದು ಹೇಳಬಯಸುತ್ತೇನೆ.

ರಾಜ್ಯದ ಕರಾವಳಿ ಪ್ರದೇಶಗಳಲ್ಲಿ ಮೀನುಗಳ ಸಂತಾನಾಭಿವೃದ್ಧಿ.

173(1842)

ಶ್ರೀ ಪ್ರಭಾಕರ ಬಂಗೇರ ಕೆ.(ಬೆಳ್ತಂಗಡಿ): ಮಾನ್ಯ ಮೀನುಗಾರಿಕೆ, ಬಂದರು ಮತ್ತು ಪ್ರದೇಶಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯಪಟ್ಟು ಉತ್ತರಿಸುವರೆ?

ಅ) ರಾಜ್ಯದ ಕರಾವಳಿ ಪ್ರದೇಶಗಳಲ್ಲಿ ಮೀನುಗಳ ಸಂತಾನಾಭಿವೃದ್ಧಿ ಮಾಡಲು ಸರ್ಕಾರದವರು ಕೈಗೊಂಡ ಕ್ರಮಗಳೇನು?

ಆ) ಒಳನಾಡು ಪ್ರದೇಶಗಳ ಕೆರೆ, ನದಿಗಳಲ್ಲಿ ಮೀನುಗಾರಿಕೆ ತಳಿ ಅಭಿವೃದ್ಧಿ ಮತ್ತು ಮೀನುಗಾರಿಕೆಗೆ ಪ್ರೋತ್ಸಾಹ ನೀಡುವ ಯೋಜನೆಗಳು ಯಾವುವು?

ಇ) ಮೀನುಗಾರಿಕೆ ಇಲಾಖೆಯಿಂದ ಒಳನಾಡು ಮೀನುಗಾರಿಕೆ ಅಭಿವೃದ್ಧಿ ಮತ್ತು

ನಬಾರ್ಡ್ ಯೋಜನೆ ಅಡಿಯಲ್ಲಿ ನದಿ ಪ್ರದೇಶ ಹಾಗೂ ಗ್ರಾಮಾಂತರ ರಸ್ತೆಗಳ ಅಭಿವೃದ್ಧಿ ಮಾಡುವ ಯೋಜನೆಯನ್ನು ಸರ್ಕಾರ ಕೈಗೊಳ್ಳುತ್ತಿದೆಯೇ, ಹಾಗಿದ್ದಲ್ಲಿ ಅಂತಹ ಎಷ್ಟು ರಸ್ತೆಗಳನ್ನು ಅಭಿವೃದ್ಧಿಪಡಿಸಲಾಗಿದೆ? (ಕಳೆದ 3 ವರ್ಷಗಳ ವಿವರ ನೀಡುವುದು)

ಶ್ರೀ ಬಿ.ರಮಾನಾಥ ರೈ (ಮೀನುಗಾರಿಕೆ, ಬಂದರು ಮತ್ತು ಪ್ರದೇಶಾಭಿವೃದ್ಧಿ ಸಚಿವರು):

ಅ) ರಾಜ್ಯದ ಕರಾವಳಿ ಮೀನುಗಾರಿಕೆಯು ಸಮುದ್ರದಲ್ಲಿ ಸಹಜವಾಗಿ ಲಭ್ಯವಾಗುವ ಮತ್ಸ್ಯ ಸಂಪತ್ತನ್ನು ಆಧುನಿಕ ತಂತ್ರಜ್ಞಾನದಿಂದ ಹಿಡಿಯುವುದಕ್ಕೆ ಸೀಮಿತವಾಗಿರುತ್ತದೆ. ಮುಂಗಾರು ಋತುವಿನಲ್ಲಿ ಪ್ರತಿ ವರ್ಷದ ಜೂನ್ 10 ರಿಂದ ಆಗಸ್ಟ್ 15ರವರೆಗೆ ಮೀನು ಹಿಡಿಯುವುದನ್ನು ನಿಷೇಧಿಸಿ ಸಂತಾನಾಭಿವೃದ್ಧಿಗೆ ಅವಕಾಶ ಮಾಡಿಕೊಡಲಾಗಿದೆ.

ಆ) ರಾಜ್ಯದಲ್ಲಿ ಒಳನಾಡು ಪ್ರದೇಶಗಳ ಕೆರೆ, ನದಿಗಳಲ್ಲಿ ಮೀನುಗಾರಿಕೆ ತಳಿ ಅಭಿವೃದ್ಧಿ ಮತ್ತು ಮೀನುಗಾರಿಕೆಗೆ ಪ್ರೋತ್ಸಾಹ ನೀಡಲು ಈ ಕೆಳಕಂಡ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ.

1) ಮೀನು ಮರಿ ಉತ್ಪಾದನೆ, ಪಾಲನೆ ಮತ್ತು ಹಂಚಿಕೆ.

2) ಅಚ್ಚುಕಟ್ಟು ಪ್ರಾಧಿಕಾರಗಳ ಜೌಗು ಮತ್ತು ಚೌಳು ಪ್ರದೇಶಗಳನ್ನು ಮೀನುಗಾರಿಕೆಗಾಗಿ ಅಭಿವೃದ್ಧಿಪಡಿಸುವುದು.

3) ಜಲಾಶಯ ಮೀನುಗಾರಿಕೆ ಅಭಿವೃದ್ಧಿ

4) ಎನ್.ಸಿಡಿಸಿ ನೆರವಿನ ಸಮಗ್ರ ಒಳನಾಡು ಮೀನುಗಾರಿಕೆ ಅಭಿವೃದ್ಧಿ ಯೋಜನೆ ಅನುಷ್ಠಾನ.

5) ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆಗಳು

6) ಬಾವಿ ಮತ್ತು ಹೊಂಡಗಳಲ್ಲಿ ಮೀನುಗಾರಿಕೆ ಅಭಿವೃದ್ಧಿಗಾಗಿ ಸಹಾಯ.

7) ಹುಲ್ಲುಗೆಂಡೆ ಮೀನು ಮರಿಗಳ ಸರಬರಾಜಿಗೆ ಸಹಾಯ.

8) ಮೀನು ಕೊಳಗಳ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸುವುದು.

9) ಅಲಂಕಾರಿಕ ಮೀನುಗಳ ಉತ್ಪಾದನೆ ಮತ್ತು ಮಾರಾಟಕ್ಕಾಗಿ

ಮಹಿಳೆಯರಿಗೆ ಸಹಾಯ.

10) ಮೀನು ಕೃಷಿ ಕೊಳ ನಿರ್ಮಾಣಕ್ಕೆ ಸಹಾಯಧನ.

ಇ) ಹೌದು, ಒಳನಾಡು ಮೀನುಗಾರಿಕೆ ಮತ್ತು ಅಭಿವೃದ್ಧಿ ಮತ್ತು ನಬಾರ್ಡ್ ಸಂಸ್ಥೆಯ ಗ್ರಾಮೀಣ ಮೂಲಭೂತ ಸೌಕರ್ಯದ ಅಭಿವೃದ್ಧಿ ಆರ್‌ಐಡಿಎಫ್-4ರಡಿಯಲ್ಲಿ ಚಾಮರಾಜನಗರ ಜಿಲ್ಲೆಯಲ್ಲಿನ ಹೂಗ್ಯಾಂ ಜಲ್ಲಿ ಪಾಳ್ಯಂ ರಸ್ತೆಯು ಪೂರ್ಣಗೊಂಡಿರುತ್ತದೆ. ಇದರ ಹೊರತು ಒಳನಾಡು ಮೀನುಗಾರಿಕೆ ವಲಯದಲ್ಲಿ ಬೇರೆ ಕೆಲಸವನ್ನು ತೆಗೆದುಕೊಂಡಿರುವುದಿಲ್ಲ ಆರ್‌ಐಡಿಎಫ್-4 ಮತ್ತು 5ರಡಿ ಕರಾವಳಿ ವಲಯದಲ್ಲಿ ಒಟ್ಟು 10 ರಸ್ತೆಗಳ ಕೆಲಸವನ್ನು ತೆಗೆದುಕೊಳ್ಳಲಾಗಿದೆ. ಇದರಲ್ಲಿ ಮೂರು ರಸ್ತೆಗಳು ಪೂರ್ಣಗೊಂಡಿರುತ್ತದೆ. ಮೂರು ರಸ್ತೆಗಳು ಪ್ರಗತಿಯಲ್ಲಿವೆ ಮತ್ತು ನಾಲ್ಕು ರಸ್ತೆಗಳಿಗೆ ಟೆಂಡರುಗಳನ್ನು ಕರೆಯಲಾಗಿದೆ. (ಏವರಗಳನ್ನು ಲಗತ್ತಿಸಲಾಗಿದೆ)

Annexure-I

RIDF-IV

Sl. No.	Name of work	Cost (Rs. in lakhs)	Expen-diture (31.5.01)	Targe-tted date of comple-tion	Remarks
1)	Improvement to Thottam Kodibengre Road, Udupi Taluk	9.13	8.65	22.9.2000	Work completed (31.3.2001)
2)	Improvement to Uppinakote Honnala Road, Udupi Taluk	8.04	9.02	24.9.2000	Work completed (31.5.2001)
3)	Improvement of Road Uppunda Geru Samaskarana Kendra to Karkikali Kundapur Taluk	11.00	7.91	17.6.2001	Earth work formation completed
4)	Improvement to Mahalingeshwara Kumbhashi Karavali Karkikadu Kunara Road, Kundapur Taluk.	16.01	12.95	15.2.2001	Formation and WBM completed Asphalting work is pending.

5)	Improvement to Mangalore Bengre Road, Mangalore Taluk	8.50	9.14	15.4.2001	Work completed (9.3.2001)
6)	Improvement to Hugyam Jellipalyam road in Kollegal Taluk	9.20	10.30	Sept. 2000	Work completed (December 2000)
	Total:	61.80	57.97		

ANNEXURE-II

RIDF - V

Sl. No.	Name of work	Cost (Rs. in lakhs)	Expen-diture (31.5.01)	Remarks
1)	Improvement to link Road from Maravanthe Mosque to Maravanthe fisheries road Kundapur Taluk	14.17	-	Tenders called and approved by Chief Engineer.
2)	Improvement to road from Koderi to Sakkaramatta in Kundapur Taluk	13.58	-	Tenders called and submitted to C.E. for approval.
3)	Improvement to Shree Durga parameshwari Temple to Olagamantapa road in Kundapur Taluk.	12.31		Tenders called & approved by Chief Engineer.
4)	Formation of road from Maravanthe Fishing Yard to N.H.47 Kundapur Taluk.	17.35		- do -

5)	Improvement to Tarapathi to Alvekodi road in Kundapur Taluk	12.95	do -
	Total:	70.36	

ಶ್ರೀ ಕೆ.ಪ್ರಭಾಕರ ಬಂಗೇರ: ಮಾನ್ಯ ಅಧ್ಯಕ್ಷರೇ, ಒಳನಾಡು ಮೀನುಗಾರಿಕೆಗಾಗಿ ಸರ್ಕಾರ ಹಾಕಿಕೊಂಡಿರುವ 10 ಯೋಜನೆಗಳ ಬಗ್ಗೆ ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ಮಾಹಿತಿಯನ್ನು ಕೊಟ್ಟಿದ್ದಾರೆ. ಎಲ್ಲೆಲ್ಲಿ ಅಂದರೆ, ಯಾವ್ಯಾವ ಪ್ರದೇಶಗಳಲ್ಲಿ ಈ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗಿದೆ? ಒಳನಾಡು ಪ್ರದೇಶದ ಮೀನುಗಾರಿಕೆ ಅಭಿವೃದ್ಧಿ ದೃಷ್ಟಿಯಿಂದ ನಬಾರ್ಡ್ ನೆರವಿನಿಂದ ರಸ್ತೆ ಮತ್ತು ಸೇತುವೆಗಳನ್ನು ನಿರ್ಮಾಣ ಮಾಡಲು ಆ ಯೋಜನೆಗಳಡಿ ಸಾಧ್ಯವೇ ಎಂಬ ಬಗ್ಗೆ ಉತ್ತರಿಸಬೇಕೆಂದು ತಮ್ಮ ಮೂಲಕ ನಾನು ಮಾನ್ಯ ಸಚಿವರನ್ನು ಕೇಳುತ್ತಿದ್ದೇನೆ.

ಶ್ರೀ ಬಿ.ರಮಾನಾಥ ರೈ: ಮಾನ್ಯ ಅಧ್ಯಕ್ಷರೇ, ಒಳನಾಡು ಮೀನುಗಾರಿಕೆಯನ್ನು ಎಲ್ಲೆಲ್ಲಿ ಕೆರೆಗಳು ಇದ್ದವೋ ಅಲ್ಲಿ ಮೀನಿನ ಮರಿಗಳನ್ನು ಬಿಟ್ಟು ಪಾಲನೆ ಮಾಡಿ ಹಂಚಿಕೆ ಮಾಡತಕ್ಕ ಪ್ರದೇಶಗಳಿಗೆ ಈ ಒಂದು ಕಾರ್ಯಕ್ರಮ ಅನ್ವಯವಾಗುತ್ತದೆ. ಬಹುಶಃ ತಾವು ಕರಾವಳಿ ಭಾಗದಿಂದ ಬಂದಿರತಕ್ಕವರಾಗಿದ್ದೀರಿ. ಒಳನಾಡು ಮೀನುಗಾರಿಕೆ ಅಂದರೆ ಕೆರೆಗಳಲ್ಲಿ ಮೀನಿನ ಮರಿಗಳನ್ನು ಬಿಟ್ಟು ಪಾಲನೆ ಮಾಡಿ ಅದನ್ನು ಹಂಚಿಕೆ ಮಾಡತಕ್ಕದ್ದು ಆಗಿದೆ. ನಮ್ಮಲ್ಲಿ ಸಾಮಾನ್ಯವಾಗಿ ಒಳನಾಡು ಭಾಗದಲ್ಲಿ ಇದು ಇಲ್ಲ. ಎಲ್ಲಿ ಒಳನಾಡು ಮೀನುಗಾರಿಕೆ ಮಾಡತಕ್ಕಂಥ ಪ್ರದೇಶ ಇದೆಯೋ ಅಲ್ಲಿ ಈ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತಿದೆ. ನಬಾರ್ಡ್ ಯೋಜನೆ 4 ಮತ್ತು 5ರ ಅಡಿಯಲ್ಲಿ ಕೆಲವು ಮೀನುಗಾರಿಕೆ ಮಾಡತಕ್ಕಂಥ ಪ್ರದೇಶಕ್ಕೆ ನಾವು ರಸ್ತೆಗಳನ್ನು ಕೊಡತಕ್ಕಂಥ ಕಾರ್ಯಕ್ರಮ ಇದೆ. ಅದರ ಅಡಿಯಲ್ಲಿ ಕೆಲವು ರಸ್ತೆಗಳನ್ನು ಆಯ್ಕೆ ಮಾಡಿ ಈಗಾಗಲೇ ಆ ಕಾರ್ಯಕ್ರಮ ಚಾಲ್ತಿಯಲ್ಲಿದೆ.

ಶ್ರೀ ಕೆ.ಪ್ರಭಾಕರ ಬಂಗೇರ: ಮಾನ್ಯ ಅಧ್ಯಕ್ಷರೇ, ಒಳನಾಡು ಮೀನುಗಾರಿಕೆ ಪ್ರದೇಶಗಳಲ್ಲಿ ಕೂಡ ಸಂಪರ್ಕ ರಸ್ತೆಯನ್ನು ಅಥವಾ ಸೇತುವೆಗಳನ್ನು ನಿರ್ಮಾಣ ಮಾಡುವ ಯೋಜನೆಯನ್ನು ಇನ್ನು ಮುಂದೆಯಾದರೂ ಅಂದರೆ ಈ ವರ್ಷದಲ್ಲಾದರೂ ಅವರು ಅಳವಡಿಸುತ್ತಾರೆಯೇ ಎಂದು ನಾನು ತಮ್ಮ ಮೂಲಕ ಕೇಳಲಿಕ್ಕೆ ಇಚ್ಛಿಪಡುತ್ತೇನೆ.

ಶ್ರೀ ಬಿ.ರಮಾನಾಥ ರೈ: ಮಾನ್ಯ ಅಧ್ಯಕ್ಷರೇ, ಸಾಮಾನ್ಯವಾಗಿ ಕರಾವಳಿ ಪ್ರದೇಶದ ಮೀನುಗಾರಿಕೆ ಕಸುಬು ಮಾಡತಕ್ಕಂಥ ಪ್ರದೇಶದಲ್ಲಿ ನಾವು ಈ ಒಂದು ರಸ್ತೆಗಳ ನಿರ್ಮಾಣಕ್ಕೆ ಹಣವನ್ನು ಕೊಡುತ್ತಿದ್ದೇವೆ. ಮುಂದಿನ ಹಂತದಲ್ಲಿ ಒಳನಾಡಿನಲ್ಲೂ ಕೂಡ ಈ ಒಂದು ಕಾರ್ಯಕ್ರಮವನ್ನು ವಿಸ್ತರಣೆ ಮಾಡುತ್ತೇವೆ.

ಶ್ರೀ ಎನ್.ಯೋಗೀಶ್ ಭಟ್: ಮಾನ್ಯ ಅಧ್ಯಕ್ಷರೇ, ಕೇರಳ, ಗೋವಾ ಹಾಗೂ ಕರ್ನಾಟಕದಲ್ಲಿ ಮೀನು ಹಿಡಿಯುವುದನ್ನು ನಿಷೇಧಿಸುವ ಬೇರೆ ಬೇರೆ ಅವಧಿಗಳು

ಇರುವುದರಿಂದ ನಾವು ನಿಗದಿಪಡಿಸಿರುವಂತಹ ಅವಧಿಯಲ್ಲಿ ಬೇರೆಯವರು ಮೀನುಗಾರಿಕೆ ಮಾಡುವುದರಿಂದ ನಮಗೆ ಆಗುವಂತಹ ತೊಂದರೆಯನ್ನು ನಿವಾರಿಸಲಿಕ್ಕೆ ಸರ್ಕಾರ ಏನು ಕ್ರಮವನ್ನು ಕೈಗೊಳ್ಳುತ್ತದೆ? ನದಿ ಸಮುದ್ರವನ್ನು ಸೇರುವಂತಹ ಪ್ರದೇಶಗಳಲ್ಲಿ ಹೂಳೆತ್ತುವಿಕೆ ಸಾಧ್ಯವಾಗದೆ ಅನೇಕ ದೋಣಿ ದುರಂತಗಳು ಸಂಭವಿಸುತ್ತಿರುವಂತಹ ಹಿನ್ನೆಲೆಯಲ್ಲಿ ಅಲ್ಲಿ ಡಿ-ಸಿಲ್ಟಿಂಗ್ ಮಾಡಲು ಏನು ಕ್ರಮವನ್ನು ಕೈಗೊಳ್ಳಲಾಗುತ್ತದೆ?

ಶ್ರೀ ಬಿ.ರಮಾನಾಥ ರೈ: ಮಾನ್ಯ ಅಧ್ಯಕ್ಷರೇ, ಮಳೆಗಾಲದ ಋತುವಿನಲ್ಲಿ ಕರಾವಳಿ ಭಾಗದಲ್ಲಿ ಮೀನು ಮರಿ ಉತ್ಪಾದನೆಯಾಗುವುದರಿಂದ ಆ ಋತುವಿನಲ್ಲಿ ಕಡ್ಡಾಯವಾಗಿ ಮೀನುಗಾರಿಕೆ ಮಾಡಬಾರದು ಎಂಬುದು ಸರ್ಕಾರದ ನಿಲುವು. ಅದನ್ನು ನಾವು ಕಟ್ಟುನಿಟ್ಟಾಗಿ ಪಾಲಿಸುತ್ತಿದ್ದೇವೆ.

ಶ್ರೀ ಕೆ.ಜಯಪ್ರಕಾಶ್ ಹೆಗಡೆ: ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಮಳೆಗಾಲದಲ್ಲಿ ಮೀನುಗಾರಿಕೆಯನ್ನು ನಿಷೇಧಿಸಲಾಗಿದೆ. ಆ ಸಂದರ್ಭದಲ್ಲಿ ಮೀನುಗಾರಿಕೆ ಮಾಡಿದರೆ ಏನು ಕ್ರಮವನ್ನು ಕೈಗೊಳ್ಳಲಾಗುವುದು? ಮಲೆನಾಡಿನ ಪ್ರದೇಶಗಳಲ್ಲಿ ಒಳನಾಡು ಮೀನುಗಾರಿಕೆ ಮಾಡಲಿಕ್ಕೆ ಅನೇಕ ಅವಕಾಶಗಳಿವೆ. ಅದಕ್ಕಾಗಿ ಏನಾದರೂ ಹೊಸ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಗಿದೆಯೇ?

ಶ್ರೀ ಬಿ.ರಮಾನಾಥ ರೈ: ಮಾನ್ಯ ಅಧ್ಯಕ್ಷರೇ, ಈ ಋತುವಿನಲ್ಲಿ ಮೀನುಗಾರಿಕೆ ಮಾಡಬಾರದು ಎಂಬ ನಿಷೇಧ ಇದ್ದರೂ ಕೂಡ ಕೆಲವರು ಮೀನುಗಾರಿಕೆಗೆ ಹೋಗುತ್ತಿರುತ್ತಾರೆ. ಇದರ ಬಗ್ಗೆ ನಮಗೆ ದೂರುಗಳು ಬಂದಿವೆ. ಅವುಗಳ ಬಗ್ಗೆ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳಲಿಕ್ಕೆ ನಾವು ಜಿಲ್ಲಾಧಿಕಾರಿಗಳಿಗೆ ಸೂಕ್ತವಾದ ನಿರ್ದೇಶನ ಕೊಟ್ಟಿದ್ದೇವೆ.

ಸಕ್ಕರೆ ನಿಯಂತ್ರಣ ಕಾಯ್ದೆ ಪ್ರಕಾರ ರೈತರಿಗೆ ಬಡ್ಡಿ ಕೊಡುವುದು.

176(2349)

ಶ್ರೀ ರಮೇಂದ್ರನಾಥ್ ಎಸ್.ಎ.(ಮಾಯಕೊಂಡ): ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೇಂದ್ರ ಸಕ್ಕರೆ ನಿಯಂತ್ರಣ ಕಾಯಿದೆ ಪ್ರಕಾರ ಸಕ್ಕರೆ ಕಾರ್ಖಾನೆಗಳಿಗೆ ಕಬ್ಬು ಸರಬರಾಜು ಮಾಡುವ ರೈತರಿಗೆ ಕೊಡಬೇಕಾದಂತಹ ಕಬ್ಬಿನ ಬಿಲ್ಲಿನ ಹಣವನ್ನು